**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ, ಪೊನ್ನಂಪೇಟೆ.**

**ಕ್ರಿ.ಮೊ.ಸಂಖ್ಯೆ:612/2018**

**ಪಿರ್ಯಾದುದಾರರು:** : ರಾಜ್ಯ ಸರ್ಕಾರ,
ವಲಯಾರಣ್ಯಾಧಿಕಾರಿ,
ಕಲ್ಲಹಳ್ಳ ವಲಯ,

**ವಿರುದ್ಧ**

**ಆರೋಪಿಗಳು:**

1. ಶ್ರೀ ಗಣೇಶ,
ತಂದೆ: ಬಸವ,
ಪ್ರಾಯ: 45 ವರ್ಷ,
ವಾಸ: ನಿಟ್ಟೂರು ಗ್ರಾಮ,
ವಡ್ಡರಮಾಡು, ಕೊಡಗು.

2. ಶ್ರೀ ಅಪ್ಪಿ,
ತಂದೆ: ವೆಂಕಟ,
ಪ್ರಾಯ: 45 ವರ್ಷ,
ವಾಸ: ನಿಟ್ಟೂರು ಗ್ರಾಮ,
ವಡ್ಡರಮಾಡು, ಕೊಡಗು.

3. ಶ್ರೀ ಶೇಖರ,
ತಂದೆ: ಗಣಪತಿ,
ಪ್ರಾಯ: 30 ವರ್ಷ,
ವಾಸ: ನಿಟ್ಟೂರು ಗ್ರಾಮ,
ವಡ್ಡರಮಾಡು, ಕೊಡಗು.

**ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಗಳ ಹೇಳಿಕೆ**

**ಪ್ರಶ್ನೆ ಸಂಖ್ಯೆ - 1** : ಇದುವರೆವಿಗೂ ಅಭಿಯೋಜನೆ ಪರ ಸಾಕ್ಷ್ಯ ನುಡಿದ ಸಾಕ್ಷಿಗಳ ಸಾಕ್ಷ್ಯವನ್ನು ಆಲಿಸಿದ್ದೀರಾ?

ಉತ್ತರ: ಔದು

**ಪ್ರಶ್ನೆ ಸಂಖ್ಯೆ - 2.** ಪ್ರಾ.ಸಾ.1/ಚಾ.ಸಾ.1 ಕನಕರಾಜು ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ:28.10.2015 ರಂದು ಹತ್‌ಗಾಟ್ ಅರಣ್ಯ ಪ್ರದೇಶದಲ್ಲಿ ಸರ್ವೆ ನಂ.148 ರಲ್ಲಿ ಕೇಶವನಕೊಲ್ಲಿ ಆಸೂಪಾಸಿನಲ್ಲಿ ತೇಗದ ಮರಗಳನ್ನು ಕಡಿದು ಸಾಗಾಟ ಮಾಡುತ್ತಿರುವುದಾಗಿ ಮಾಹಿತಿ ಬಂದ ಮೇರೆಗೆ ತಾನು ಚಾ.ಸಾ.2, 3, 4 ಮತ್ತು 5 ರವರು ಕಾದು ಕುಳಿತಿರುವಾಗ ಸ್ವಲ್ಪ ಸಮಯದ ನಂತರ ಮರಗಳನ್ನು ಕಡಿದು ನಾಟಗಳನ್ನಾಗಿ ಪರಿವರ್ತಿಸುತ್ತಿರುವಾಗ ನಾವುಗಳು ಹಿಡಿಯಲು ಹೋದಾಗ ಒಬ್ಬರು ಸಿಕ್ಕಿರುತ್ತಾರೆ ಉಳಿದವರು ಪರಾರಿಯಾಗಿರುತ್ತಾರೆ. ಸದರಿ ವ್ಯಕ್ತಿಯನ್ನು ವಿಚಾರಿಸಲಾಗಿ ಆತನ ಹೆಸರು ಗಣೇಶ ಎಂದು ಪರಾರಿಯಾದರವರ ಹೆಸರು ಅಪ್ಪಿ, ಗಿರಿ, ಅಯ್ಯ, ಶೇಖರ್ ಎಂದು ತಿಳಿಸಿರುತ್ತಾನೆ. ಎರಡು

ತೇಗದ ಮರಗಳನು ಕಡಿದಿರುವುದು ಕಂಡು ಬಂದಿದ್ದು, ಅವುಗಳನ್ನು ಮಹಜರ್ ಮಾಡಿ ನಾಟಾಗಳಿಗೆ ಇಲಾಖಾ ಚಾಪಾ ಗುರುತು ಕ್ರಮ ಸಂಖ್ಯೆ 1 ರಿಂದ 6 ಎಂದು ನೀಡಿ ಕತ್ತಿ ಮತ್ತು ಗರಗಸವನ್ನು ಅಮಾನತ್ತು ಪಡಿಸಿ ಸ್ಥಳದಲ್ಲಿ ಎಫ್.ಓ.ಸಿ ಯನ್ನು ದಾಖಲಿಸಿ ನ್ಯಾಯಾಲಯಕ್ಕೆ 1ನೇ ಆರೋಪಿಯಾದ ನಿಮ್ಮನ್ನು ಹಾಜರು ಪಡಿಸಿರುವುದಾಗಿ ಮತ್ತು ಸಾಕ್ಷಿಯು ತಮ್ಮ ಮುಂದುವರಿದ ವಿಚಾರಣೆಯಲ್ಲಿ ಚಾ.ಸಾ.7 ರವರು ಮೃತಪಟ್ಟಿದ್ದು ಅವರ ಸಹಿಯನ್ನು ನೋಡಿದರೆ ಗುರ್ತಿಸುವುದಾಗಿ ಮತ್ತು ಚಾ.ಸಾ.7 ರವರು ಅಂತಿಮ ದೂರನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ

**ಪ್ರಶ್ನೆ ಸಂಖ್ಯೆ - 3.** ಪ್ರಾ.ಸಾ.2/ಚಾ.ಸಾ.2 ನೂರ್ ಮೊಹಮ್ಮದ್ ಬಿ ಲೈನ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ28.10.2015 ರಂದು ಗಸ್ತು ಕರ್ತವ್ಯದಲ್ಲಿರುವಾಗ ಚಾ.ಸಾ.1 ರವರಿಗೆ ಹತ್‌ಗಾಟ್ ಅರಣ್ಯ ಪ್ರದೇಶದಲ್ಲಿ ಸರ್ವೆ ನಂ.148 ರಲ್ಲಿ ಕೇಶವನಕೊಲ್ಲಿ ಆಸೂಪಾಸಿನಲ್ಲಿ ತೇಗದ ಮರಗಳನ್ನು ಕಡಿದು ಸಾಗಾಟ ಮಾಡುತ್ತಿರುವುದಾಗಿ ಮಾಹಿತಿ ಬಂದ ಮೇರೆಗೆ ತಾನು ಚಾ.ಸಾ.1, 3, 4 ಮತ್ತು 5 ರವರು ಕಾದು ಕುಳಿತಿರುವಾಗ ಸ್ವಲ್ಪ ಸಮಯದ ನಂತರ ಮರಗಳನ್ನು ಕಡಿದು ನಾಟಗಳನ್ನಾಗಿ ಮಾಡುತ್ತಿರುವ ಶಬ್ದ ಕೇಳಿ ನಾವೆಲ್ಲರೂ ಸದರಿ ಸ್ಥಳಕ್ಕೆ ಹೋದಾಗ ಅಲ್ಲಿ ಸುಮಾರು 5 ರಿಂದ 6 ಜನ ಇದ್ದು, ಅವರು ತೇಗದ ಮರಗಳನ್ನು ಕಡಿದು ನಾಟಗಳನ್ನಾಗಿ ಮಾಡುತ್ತಿದ್ದರು. ನಾವುಗಳು ಹಿಡಿಯಲು ಹೋದಾಗ ಒಬ್ಬರು ಸಿಕ್ಕಿರುತ್ತಾರೆ ಉಳಿದವರು ಪರಾರಿಯಾಗಿರುತ್ತಾರೆ. ಸದರಿ ವ್ಯಕ್ತಿಯನ್ನು ವಿಚಾರಿಸಲಾಗಿ ಆತನ ಹೆಸರು ಗಣೇಶ ಎಂದು ಪರಾರಿಯಾದರವರ ಹೆಸರು ಅಪ್ಪಿ, ಗಿರಿ, ಅಯ್ಯ, ಶೇಖರ್ ಎಂದು ತಿಳಿಸಿರುತ್ತಾನೆ. ಎರಡು ತೇಗದ ಮರಗಳನು ಕಡಿದಿರುವುದು ಕಂಡು ಬಂದಿದ್ದು, ಅವುಗಳನ್ನು ಮಹಜರ್ ಮಾಡಿ ನಾಟಾಗಳಿಗೆ ಇಲಾಖಾ ಚಾಪಾ ಗುರುತು ಕ್ರಮ ಸಂಖ್ಯೆ 1 ರಿಂದ 6 ಎಂದು ನೀಡಿ ಕತ್ತಿ ಮತ್ತು ಗರಗಸವನ್ನು ಅಮಾನತ್ತು ಪಡಿಸಿ ಸ್ಥಳದಲ್ಲಿ ಎಫ್.ಓ.ಸಿ ಯನ್ನು ದಾಖಲಿಸಿ ಮಹಜರ್ ಅನ್ನು ರಾತ್ರಿ 12.30 ರಿಂದ 3.30 ರ ತನಕ ಮಾಡಿರುತ್ತೇವೆ ನಂತರ ನ್ಯಾಯಾಲಯಕ್ಕೆ 1ನೇ ಆರೋಪಿಯಾದ ನಿಮ್ಮನ್ನು ಹಾಜರು ಪಡಿಸಿರುವುದಾಗಿ ಮತ್ತು ಸಾಕ್ಷಿಯು ಕತ್ತಿ, ಗರಗಸ ಮತ್ತು ಆರೋಪಿತರಾದ ನಿಮ್ಮನ್ನು ನೋಡಿದರೆ ಗುರ್ತಿಸುವುದಾಗಿ ಮತ್ತು ಈ ಬಗ್ಗೆ ತನಿಖಾಧಿಕಾರಿಗಳು ವಿಚಾರಣೆ ಮಾಡಿ ಹೇಳಿಕೆ ಪಡೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ

**ಪ್ರಶ್ನೆ ಸಂಖ್ಯೆ -4 :** ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ದಾಖಲಾತಿ ಹಾಜರುಪಡಿಸಲು ಬಯಸುವಿರಾ?

ಉತ್ತರಃ

**<u>ಪ್ರಶ್ನೆ ಸಂಖ್ಯೆ - 5 :</u>** **ಈ ಪ್ರಕರಣದಲ್ಲಿ ನೀವೇನಾದರೂ ಹೇಳಬಯಸುವಿರಾ?**

ಉತ್ತರಃ

**(ತೆರೆದ ನಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತನು ನೀಡಿದ ಉತ್ತರಗಳನ್ನು ದಿಃ01-12-2025 ರಂದು ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು).**

**ಸ್ಥಳಃ ಪೊನ್ನಂಪೇಟೆ**
**ದಿಃ01.12.2025.**

**ಶ್ರೀ ಶ್ರೀನಾಥ್ ಎ**
**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.**
**ಪೊನ್ನಂಪೇಟೆ.**